# ದಾಂಪತ್ಯದ ಬೇಲಿ ಜಿಗಿದರೆ..

27ನೇ ಪುಟದಿಂದ..



★ ಎಲ್ಲಾ ಬದ್ಧ ಸಂಬಂಧಗಳಲ್ಲಿಯೂ ಒಬ್ಬ ಸಂಗಾತಿ ಕೆಲವೊಂದು ತೀವ್ರ ಹತಾಶೆಯ ಅಥವಾ ದುರ್ಬಲ ಕ್ಷಣದಲ್ಲಿ ದಾರಿ ತಪ್ಪುವ ಸಾಧ್ಯತೆಗಳಿರುತ್ತವೆ. ಹಾಗಾಗಿ ಕೇವಲ ಒಮ್ಮೆ ಮಾತ್ರ ನಡೆದಿರಬಹುದಾದ ಘಟನೆಯ ಆಧಾರದ ಮೇಲೆ ಸಂಗಾತಿಯ ಸಂಪೂರ್ಣ ವ್ಯಕ್ತಿತ್ವ ನಂಬಿಕೆಗೆ ಅನರ್ಹ ಎಂದು ತೀರ್ಮಾನಿಸಬಾರದು. ಸಂಗಾತಿಯ ಮಾನಸಿಕ ಸ್ಥಿತಿ, ಅವರ ಇಲ್ಲಿಯವರೆಗಿನ ನಡವಳಿಕೆಯಲ್ಲಿನ ಪ್ರಾಮಾಣಿಕತೆ, ಒಟ್ಟಾರೆ ಕುಟುಂಬದ ಭವಿಷ್ಯ ಮುಂತಾದವುಗಳ ಆಧಾರದ ಮೇಲೆ ನಿರ್ಧಾರಗಳನ್ನು ಕೈಗೊಳ್ಳಬೇಕು.

★ ಸಾಕಷ್ಟು ವರ್ಷ ಒಟ್ಟಾಗಿ ಬದುಕಿದ ಮೇಲೆ ನಡೆಯುವ ವಿವಾಹಬಾಹಿರ ಸಂಬಂಧಗಳು ಇಲ್ಲಿಯವರೆಗೆ ಕಳೆದ ಜೀವನವು ಅರ್ಥಹೀನವಾದದ್ದು ಅಥವಾ ನಿರರ್ಥಕವಾದದ್ದು ಎನ್ನುವ ಭಾವನೆಗಳನ್ನು ಮೂಡಿಸುತ್ತವೆ. ಇದು ತೀವ್ರವಾದ ಮಾನಸಿಕ ಯಾತನೆ ನೀಡುವ ಸಾಧ್ಯತೆಗಳಿರುತ್ತದೆ. ವಿಚ್ಛೇದನ ತೆಗೆದುಕೊಳ್ಳುವ ನಿರ್ಧಾರ ಮಾಡಿದರೆ ಮುಂದಿನ ಸಂಬಂಧಗಳನ್ನು ಅಪನಂಬಿಕೆಯಿಂದಲೇ ಪ್ರಾರಂಭಿಸುವ ಮಾನಸಿಕ ಸ್ಥಿತಿಗೆ ಕಾರಣವಾಗುತ್ತದೆ. ಇದರಿಂದ ಎರಡನೆ ಮದುವೆಯಲ್ಲಿಯೂ ತೃಪ್ತಿ, ಸಮಾಧಾನಗಳನ್ನು ಕಂಡುಕೊಳ್ಳುವುದು ಕಷ್ಟವಾಗಬಹುದು. ಹಾಗಾಗಿ ಮತ್ತೆ ಮದುವೆಯಾಗುವ ಮೊದಲು ಆಪ್ತ ಸಲಹೆಯನ್ನು ಪಡೆದುಕೊಳ್ಳುವುದು ಅಪೇಕ್ಷಣೀಯ.

ಎಲ್ಲಾ ಬದ್ಧ ಸಂಬಂಧಗಳಲ್ಲಿ ಒಬ್ಬ ಸಂಗಾತಿ ಮೂರನೆಯವರ ಮೋಹಕ್ಕೆ ಒಳಗಾಗುವುದು ಇಂದು ನಿನ್ನೆಯ ಸಮಸ್ಯೆ ಏನಲ್ಲ. ಆಶಾದಾಯಕ ಸಮಾಚಾರವೆಂದರೆ ಎಲ್ಲಾ ವಿವಾಹಗಳಲ್ಲಿಯೂ ಒಬ್ಬ ಸಂಗಾತಿ ಮೋಸ ಮಾಡುವ ಸಾಧ್ಯತೆಗಳಿದ್ದರೂ ಇದು ನಿಜವಾಗಿ ಘಟಿಸುವುದು ಕೆಲವೇ

# ಕಾನೂನು ಏನು ಹೇಳುತ್ತದೆ?



ಪ್ರಣತಿ ಭಟ್
ವಕೀಲೆ, ಆಪ್ತ ಸಮಾಲೋಚಕಿ
★ ಮಾತುಕತೆ: ಸುಚೇತನಾ ನಾಯ್ಕ

★ ಕಾನೂನಿನ ಪರಿಭಾಷೆಯಲ್ಲಿ ‘ವಿವಾಹೇತರ ಸಂಬಂಧ’ ಎಂದರೇನು?

ಹೆಸರೇ ಸೂಚಿಸುವಂತೆ, ಗಂಡ ಅಥವಾ ಹೆಂಡತಿ ಇನ್ನೊಂದು ಹೆಣ್ಣು ಅಥವಾ ಗಂಡಿನ ಜೊತೆ ಸಂಬಂಧ ಹೊಂದಿದ್ದರೆ ಅದು ವಿವಾಹೇತರ ಸಂಬಂಧ. ಗಂಡು ಅಥವಾ ಹೆಣ್ಣು ಮದುವೆಯಾಗುವ ಮುನ್ನ ಬೇರೊಂದು ಸಂಬಂಧ ಹೊಂದಿದ್ದು, ಅದು ಮದುವೆಯ ನಂತರವೂ ಮುಂದುವರೆದರೆ ಅದು ವಿವಾಹೇತರ ಸಂಬಂಧವೇ. (ಕಟ್ಟುಪಾಡಿಗೆ ಒಳಬಿದ್ದೋ ಅಥವಾ ಮನೆಯವರ ಒತ್ತಾಸೆಗೋ ಮದುವೆಯಾಗುವ ಉದಾಹರಣೆಗಳಿವೆ. ಕಾರಣ ಏನೇ ಇದ್ದರೂ, ಕಾನೂನಿನ ಪ್ರಕಾರ, ಮೊದಲು ಇದ್ದ ಸಂಬಂಧ ‘ವಿವಾಹೇತರ’ ಎನಿಸಿಕೊಳ್ಳುತ್ತದೆ). ವಿವಾಹೇತರ ಸಂಬಂಧ ಎನಿಸಿಕೊಳ್ಳಲು ಅಲ್ಲಿ ಇನ್ನೊಬ್ಬರ ಜೊತೆ ದೈಹಿಕ ಸಂಬಂಧ ಮಾತ್ರವೇ ಆಗಿರಬೇಕೆಂದೇನೂ ಇಲ್ಲ. ಮಾನಸಿಕವಾಗಿಯೂ ಸಂಬಂಧ ಹೊಂದಿದ್ದರೂ ಸಾಕು. ಅಂದರೆ ಗಂಡ ಅಥವಾ ಹೆಂಡತಿ ತನ್ನ ಸಂಗಾತಿಯನ್ನು ಕಡೆಗಣಿಸಿ ಇನ್ನೊಬ್ಬ ಅಥವಾ ಇನ್ನೊಬ್ಬಳ ಜೊತೆಯೇ ಸದಾ ತಿರುಗುವುದು, ಅಸಹ್ಯ ಎನಿಸುವಂಥ ಸಂಭಾಷಣೆಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದು, ಈ ಮೂಲಕ ಸಂಗಾತಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವುದು, ದಂಪತಿ ನಡುವೆ ಇರಬೇಕಿರುವ ತೀರಾ ವೈಯಕ್ತಿಕ ಗುಟ್ಟುಗಳನ್ನು ಇಲ್ಲವೇ ತಮ್ಮ ವೈಯಕ್ತಿಕ ವಿಷಯಗಳನ್ನು ಬೇರೊಬ್ಬರ ಜೊತೆ ಸದಾ ಹಂಚಿಕೊಳ್ಳುವುದು, ಗಂಡ/ಹೆಂಡತಿಯನ್ನು ಕಡೆಗಣಿಸಿ ಇನ್ನೊಬ್ಬರ ತಾಳಕ್ಕೆ ಕುಣಿಯುವುದು, ಅವರ ಅಗತ್ಯಗಳಿಗೇ ಆದ್ಯತೆ ನೀಡಿ ಸಂಸಾರವನ್ನು ಕಡೆಗಣಿಸುವುದು ಕೂಡ ಇದೇ ವ್ಯಾಪ್ತಿಗೆ ಬರುತ್ತದೆ. ಈ ರೀತಿಯ ಸಂಬಂಧವನ್ನು ನಾವು ಇಂದಿನ ದಿನಗಳಲ್ಲಿ ಕಾಣುವುದು, ಕೇಳುವುದು ಮಾಮೂಲು. ಆದರೆ ಸಂತ್ರಸ್ತ ಹೆಂಡತಿ ಅಥವಾ ಗಂಡ ದೂರು ನೀಡಿದರೆ ಮಾತ್ರ ಆಗ ಅದು ಕಾನೂನಿನ ವ್ಯಾಪ್ತಿಗೆ ಒಳಪಡುತ್ತದೆ.

★ ಸುಪ್ರೀಂಕೋರ್ಟ್ ಈಗ ’ಲಿವ್ ಇನ್ ರಿಲೇಷನ್’ ಸಂಬಂಧಕ್ಕೆ ಕಾನೂನಿನ ಮನ್ನಣೆ ನೀಡಿದೆ. ಈ ಸಂಬಂಧದಲ್ಲಿ ಇರುವ ಜೋಡಿಯಲ್ಲಿ ಒಬ್ಬರು ಇನ್ನೊಂದು ಸಂಬಂಧ ಹೊಂದಿದ್ದರೆ...?

ಇದು ‘ವಿವಾಹೇತರ ಸಂಬಂಧ’ ಎನಿಸಿಕೊಳ್ಳುವುದಿಲ್ಲ. ಈ ಸಂಬಂಧಕ್ಕೆ ಕೋರ್ಟ್ ಮನ್ನಣೆ ಕೊಟ್ಟಿದ್ದರೂ ಇಲ್ಲಿ ‘ವಿವಾಹ’ ಎನ್ನುವ ಸಂಬಂಧ ಇಲ್ಲ. ‘ವಿವಾಹ’ವೇ ಇಲ್ಲದ ಮೇಲೆ ‘ವಿವಾಹೇತರ’ ಎನ್ನುವುದು ಹೇಗೆ? ಆದ್ದರಿಂದ ’ವಿವಾಹೇತರ ಸಂಬಂಧ’ ಎನಿಸಿಕೊಳ್ಳಬೇಕಿದ್ದರೆ ಅಲ್ಲಿ ‘ವಿವಾಹ’ ಆಗಿರಲೇಬೇಕು.

★ ವಿಧಿವಿಧಾನಗಳ ಮೂಲಕವೇ ವ್ಯಕ್ತಿಯೊಬ್ಬ ಎರಡನೆಯ ಮದುವೆಯಾದರೆ...?

ಮೊದಲ ಹೆಂಡತಿಯ ಒಪ್ಪಿಗೆ ಪಡೆದು, ಆಕೆಯ